ಮೇಲ್ಕಂಡ ಪ್ರಕರಣಗಳ ಚಿನ್ಹೆ ಮತ್ತು ಲಕ್ಷಣಗಳನ್ನು ಪರಿಶೀಲಿಸಿ ನೋಡಲಾಗಿ ಅವು ಮಂಗನ ಕಾಯಿಲೆಗೆ ಸಂಬಂಧಿಸಿಗ ಎಂದು ತಿಳಿದುಬಂದಿದೆ ಮೊದಲನೆಯ ಪ್ರಕರಣವು ರಿಪ್ಪನ್‌ಪೇಟೆಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದಿನಾಂಕ ೮-೩-೧೯೮೮ ರಂದು ವರದಿಯಾಗಿದ್ದು, ನಂತರ ೪೭ ಪ್ರಕರಣಗಳು ದಿ ೧೭-೩-೧೯೮೮ರವರೆಗೆ ಪತ್ತೆ ಹಚ್ಚಲಾಗಿದೆ ಮೇಲ್ಕಂಡ ಪ್ರಕರಣಗಳಲ್ಲಿ ಯಾವ ಪ್ರಕರಣಗಳು ಸಾವಿಗೆ ಈಡಾಗಿಲ್ಲ. ಆದರೆ ೭ ಮಂಗಗಳು ಸತ್ತಿದ್ದು. ಅವುಗಳಲ್ಲಿ ಒಂದು ಮಾದರಿಯನ್ನು ಪರಿಶೀಲಿಸಲಾಗಿ ಮಂಗನ ಕಾಯಿಲೆಗೆ ಸಂಬಂಧಿಸಿದಂತಹ ವಾಸ್ತವಾಂಶ ದೊರಕಿಲ್ಲ. ಆದರೆ ಮನುಷ್ಯರ ೬ ಪ್ರಕರಣಗಳು ಮಂಗನ ಕಾಯಿಲೆಗೆ ಒಳಗಾಗಿವೆ ಎಂದು ಖಚಿತಪಡಿಸಲಾಗಿದೆ.

ಶಿವಮೊಗ್ಗ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಮತ್ತು ಉಪ ನಿರ್ದೇಶಕರು, ಪರಿಮಾಣಜೀವಿ ಪ್ರಯೋಗಾಲಯ, ಶಿವಮೊಗ್ಗ ಇವರು ಅವಶ್ಯಕವಾದ ಔಷಧಿಗಳನ್ನು ದ್ರವಗಳನ್ನು ಮತ್ತು ಉಣ್ಣುಗಳ ಕಡಿತವನ್ನು ತಡೆಗಟ್ಟಲು ಮಂಲಾಮು ಇತ್ಯಾದಿಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ರಿಪ್ಪನ್‌ಪೇಟೆ ಇವಕ್ಕೆ ಒದಗಿಸಲಾಗಿದೆ. ತೀವ್ರ ರೀತಿಯ ನಿಗಾವಣೆ ಇಡಲು ಮತ್ತು ತಪಾಸಣೆ ನಡೆಸಲು ಬೆಳ್ಳೂರನ್ನು ಕೇಂದ್ರಸ್ಥಾನವನ್ನಾಗಿ ನಿಗದಿಪಡಿಸಿ ೪ ವೈದ್ಯಾಧಿಕಾರಿಗಳ ನೇತೃತ್ವದಲ್ಲಿ ಆರೋಗ್ಯ ಸಂದರ್ಶಕಿ, ಸಹಿಳಾ ಆರೋಗ್ಯ ಸಹಾಯಕಿ ಮತ್ತು ಕಿರಿಯ ಆರೋಗ್ಯ ಸಹಾಯಕರುಗಳನ್ನು ಒಳಗೊಂಡ ೪ ತಂಡಗಳನ್ನು ರಚಿಸಿ ಅವು ಸತತವಾಗಿ ಕಾರ್ಯನಿರ್ವಹಿಸಲು ವಿರ್ಪಾಡು ಮಾಡಲಾಗಿದೆ. ಇದೂ ಅಲ್ಲದೆ, ಅರಣ್ಯ ಮತ್ತು ವಿದ್ಯಾ ಇಲಾಖೆಯ ಸಿಬ್ಬಂದಿಯವರನ್ನು ಸಂಪರ್ಕಿಸಿ ಮಂಗಗಳ ಸಾವುಗಳು ಕಂಡ ಪಕ್ಷದಲ್ಲಿ ಅವುಗಳನ್ನು ಸಾಗರದಲ್ಲಿರುವ ಮಂಗನ ಕಾಯಿಲೆಯ ಕ್ಷೇತ್ರ ಠಾಣೆಗೆ ತಿಳಿಸಬೇಕೆಂದು ಕೋರಲಾಗಿದೆ. ಅಲ್ಲಿರುವ ಸ್ಥಳೀಯ ಜನತೆಗೆ ಆರೋಗ್ಯ ಶಿಕ್ಷಣವನ್ನು ಕೂಡ ಕೊಡಲಾಗುತ್ತಿದೆ ಹಾಗೂ ಅವರು ಮೈಮೇಲೆ ಮಂಲಾಮು ಹಚ್ಚಿಕೊಳ್ಳದೆ ಕಾಡಿಗೆ ಹೋಗಕೂಡದು ಎಂದು ಸಹ ಸಲಹೆ ನೀಡಲಾಗುತ್ತಿದೆ. ಈಗ ಈ ಕಾಯಿಲೆಯು ತಹಬಂದಿಯಲ್ಲಿದ್ದು ಎಲ್ಲಾ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಮತ್ತು ಇದರ ಬಗ್ಗೆ ತೀವ್ರರೀತಿಯ ನಿಗಾವಣೆ ಇಡಲಾಗಿದೆ.

೧೧ ಜಮಖಂಡಿ ತಾಲ್ಲೂಕು ಬಿದರಿ ಗ್ರಾಮದ ಏತ ನೀರಾವರಿಯ ಜಾಕ್‌ವೆಲ್ ರಿಪೇರಿಯಾಗದೆ ರೈತರಿಗೆ ತೊಂದರೆಯಾಗಿರುವುದು.

ಶ್ರೀ ಬಾಮುರೆಡ್ಡಿ ವಿ. ತುಂಗಳ್. – ಮಾನ್ಯ ಅಧ್ಯಕ್ಷರೇ, ನನ್ನ ಸ್ವಗ್ರಾಮವಾದ ಜಮಖಂಡಿ ತಾಲ್ಲೂಕಿನ ಬಿದರಿಯಲ್ಲಿ ಕಳೆದ ಹತ್ತು ವರ್ಷಗಳಿಂದ ಸುಮಾರು ಎಪ್ಪತ್ತೈದು ಎಕರೆಗೆ ನೀರು ಪೂರೈಸುವ ಒಂದು ಏತ ನೀರಾವರಿ ಯೋಜನೆಯಿದೆ. ಕೃಷ್ಣ ನದಿಯು ಯಾವುದೇ ಭಾಗದಲ್ಲಿ ಇರಲಾರದಷ್ಟು ಅಪಾರವಾದ ಮತ್ತು ಆಳವಾದ ಜಲಸಂಗ್ರಹಣ ಇದ್ದೂ ನಮ್ಮ ಗೋಳು ತಪ್ಪಿಲ್ಲ. ಈ ಕಾಮಗಾರಿಯನ್ನು ಆರಂಭದಲ್ಲೇ ಕಳಪೆಯಾಗಿ ನಿರ್ಮಿಸಲಾಯಿತು.

ಒಂದು ವರ್ಷದ ಹಿಂದೆ ಈ ಏತ ನೀರಾವರಿಗೆ ಸಂಬಂಧಿಸಿದ ಜಾಕ್‌ವೆಲ್ ಬಿದ್ದುಹೋಯಿತು. ಈ ವಿಷಯವನ್ನು ಚಿಕ್ಕ ನೀರಾವರಿಯ ಅಧಿಕಾರಿಗಳ ಗಮನಕ್ಕೆ ಅನೇಕ ಸಲ ತಂದಿದ್ದೇನೆ. ಕಳೆದ ವಿಧಾನ ಮಂಡಲದ ಅಧಿವೇಶನದಲ್ಲಿ ಜಾಕ್‌ವೆಲ್ ದುರಸ್ತಿ ಕಾರ್ಯ ಆರಂಭವಾಗಿದ್ದು ಪೂರ್ತಿ ಕೊನೆಯೊಳಗಾಗಿ ಮುಗಿದು ಜಮೀನುಗಳಿಗೆ ನೀರು ಪೂರೈಕೆ ಕಾರ್ಯ ಆರಂಭವಾಗುವುದೆಂಬ ಉತ್ತರ ಕೊಡಲಾಯಿತು. ವಿಷಾದದ ಸಂಗತಿ ಏನೆಂದರೆ ಈವರೆಗೂ ಯಾವುದೇ ಕಾರ್ಯವಾಗಿಲ್ಲ. ಒಂದು ವಾರದ ಹಿಂದೆ ನಾನು ಊರಿಗೆ ಹೋದಾಗ ಜನರು ಏನೂ ಕಾರ್ಯ ಆಗಿಲ್ಲ. ವಿಧಾನ ಸಭೆಯಲ್ಲಿ ನಮಗೆ ತಪ್ಪು ಮಾಹಿತಿ ಕೊಟ್ಟು ಸ್ಥಳೀಯ ಅಧಿಕಾರಿಗಳು ನೀರಾವರಿ ಸಚಿವರನ್ನು ಮತ್ತು ನಿಮ್ಮನ್ನು ವಂಚಿಸಿದ್ದಾರೆ ಎಂದು ಜನರು ತಿಳಿಸಿದರು.

ಒಂದು ವರ್ಷದಿಂದ ಜಾಕ್‌ವೆಲ್ ರಿಪೇರಿ ಆಗದೆ ನೀರಾವರಿ ಕೆಲಸ ನಿಂತು ರೈತರಿಗೆ ಲಕ್ಷಾಂತರ ರೂಪಾಯಿಗಳ ಹಾನಿಯಾಗಿದೆ. ನದಿಯಲ್ಲಿ ಅಪಾರವಾದ ಜಲ ಸಂಪತ್ತು ಇದ್ದೂ ಅಧಿಕಾರಿಗಳ ನಿರ್ಲಕ್ಷ್ಯದಿಂದ ನಮ್ಮೂರು ಬೆಂಗಾಡಾಗಿದೆ. ಕಾರಣ ಸದನಕ್ಕೆ ಸುಳ್ಳು ಮಾಹಿತಿ ಪೂರೈಸಿದ ಅಧಿಕಾರಿಗಳ ಮೇಲೆ ಉಗ್ರಕ್ರಮ ತೆಗೆದುಕೊಂಡು ಈಗಲಾದರೂ ಜಾಕ್‌ವೆಲ್ ರಿಪೇರಿ ಮಾಡಿಸುವ ಕುರಿತು ತೀವ್ರ

ವಾಗಿ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ನೀರಾವರಿ ಸಚಿವರ ಗಮನ ಸೆಳೆಯುಬಯಸುತ್ತೇನೆ.

ಶ್ರೀ ಎಂ. ರಘುಪತಿ (ಬಂದರು ಮತ್ತು ಮೀನುಗಾರಿಕೆ ಸಚಿವರು).—ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಸಚಿವರು ಆ ಸದನದಲ್ಲಿದ್ದಾರೆ. ಅದಕ್ಕೆ ಉತ್ತರವನ್ನು ಆಮೇಲೆ ತರಿಸಿಕೊಡುತ್ತೇನೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

12 Filling the Post of Chief Auditor in Hubli-Dharwar Corporation

SRI A. M. HINDUSGERI.—There are two separate posts of Chief Accountant and Chief Auditor in the Hubli-Dharwad City Corporation The Chief Accountant is performing the dual duties of both Chief Accountant and Chief Auditor for the last one year What are the problems that are confronting the Government in not posting a Chief Auditor to the Hubli-Dharwad City Corporation even after one year when the post has fallen vacant. I demand a statement from the Hon'ble Minister for Urban Development.

ಶ್ರೀ ಎಂ ಚಂದ್ರಶೇಖರಿರ್ (ನಗರಾಭಿವೃದ್ಧಿ ಸಚಿವರು) —ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಯ ಆಯುಕ್ತರು ದಿನಾಂಕ ೪-೬-೧೯೮೭ರ ತಮ್ಮ ವರದಿಯಲ್ಲಿ ತಿಳಿಸಿದ ಪ್ರಕಾರ ಮುಖ್ಯ ಲೆಕ್ಕಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಎಸ್. ಆರ್. ಪಾಟೀಲ್ ಇವರು ಸರ್ಕಾರದ ಆದೇಶಾನುಸಾರ ಸಂಖ್ಯೆ ಆರ್ಥಿಕ ೬ ೭ ರೂಲೇಬ ೮೬ ದಿನಾಂಕ ೨೬-೨-೮೭ರ ಪ್ರಕಾರ ಮಹಾನಗರಪಾಲಿಕೆಯಿಂದ ೨೬-೩-೮೭ರಂದು ಬಿಡುಗಡೆ ಹೊಂದಿರುತ್ತಾರೆ. ಮಹಾನಗರಪಾಲಿಕೆಯಲ್ಲಿ ಮುಖ್ಯ ಲೆಕ್ಕಾಧಿಕಾರಿಯ ಹುದ್ದೆಯು ಬಹು ಮಹತ್ವದ್ದಾಗಿರುವುದರಿಂದ, ನಗರಪಾಲಿಕೆಯಲ್ಲಿ ಮುಖ್ಯ ಲೆಕ್ಕ ಪರಿಶೋಧಕರಾಗಿ ಕೆಲಸ ಮಾಡುತ್ತಿರುವ ಶ್ರೀ ವಿರೂಪಾಕ್ಷಪ್ಪ ಇವರನ್ನು ತಮ್ಮ ಕರ್ತವ್ಯದ ಜೊತೆಗೆ ಮುಖ್ಯ ಲೆಕ್ಕಾಧಿಕಾರಿಯ ಹುದ್ದೆಯಲ್ಲಿ ಪ್ರಭಾರವಾಗಿ ಕೆಲಸ ಮಾಡಲು ನೇಮಿಸಲಾಗಿದೆ.

ಈ ಹುದ್ದೆಯಲ್ಲಿರುವ ಅಧಿಕಾರಿಗಳು ನಿರ್ವಹಿಸಬೇಕಾಗಿರುವ ಕೆಲಸಕಾರ್ಯಗಳನ್ನು ಗಮನದಲ್ಲಿಟ್ಟುಕೊಂಡು ಈ ಹುದ್ದೆಯನ್ನು ರಾಜ್ಯ ಲೆಕ್ಕಪತ್ರ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಡೆಪ್ಯೂಟಿ ಕಂಟ್ರೋಲರ್‌ರನ್ನು ನೇಮಿಸಿ ತುಂಬಬೇಕಾಗಿದೆ. ಆದ್ದರಿಂದ ಸದರಿ ಹುದ್ದೆಯನ್ನು ತುಂಬುವ ಸಲುವಾಗಿ ಸರ್ಕಾರಿ ಪತ್ರ ಸಂಖ್ಯೆ, ಮನಇ ೫೭ ಎಎಚ್‌ಡಿ ೮೭ ದಿನಾಂಕ ೨೪-೭-೮೭ರಂದು ಆರ್ಥಿಕ ಇಲಾಖೆಯನ್ನು ವಿನಂತಿಸಿಕೊಳ್ಳಲಾಗಿದೆ ಮತ್ತು ದಿನಾಂಕ ೨೦-೮-೮೭, ೮-೧೨-೮೭ ಮತ್ತು ೨೧-೩-೮೮ರಂದು ಆರ್ಥಿಕ ಇಲಾಖೆಗೆ ಜ್ಞಾಪನಾ ಪತ್ರಗಳನ್ನು ಕಳುಹಿಸಿಕೊಡಲಾಗಿದೆ.

ಈ ಹುದ್ದೆಯನ್ನು ತುಂಬಲು ಆದಷ್ಟು ಬೇಗ ಕ್ರಮ ಕೈಗೊಳ್ಳಲಾಗುವುದು.

೧೩ ಜನತಾ ಸರ್ಕಾರದಲ್ಲಿರುವ ಭ್ರಷ್ಟಾಚಾರ ಮತ್ತು ಆಪಾದನೆಗಳ ಬಗ್ಗೆ

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ,

ಜನತಾ ಸರ್ಕಾರಕ್ಕೆ ತುಂಬಿತ್ತು ಐದು ವರ್ಷ, ಓ ಐದು ವರುಷ
ಈ ಐದು ವರುಷ ತುಂಬಿತು ಎಂದು ಸರಕಾರಕ್ಕೆ ಹರ್ಷ,
ಆದರೆ ಪತ್ರಿಕೆಗಳಲ್ಲಿ ಈಚೆಗೆ ಬಂತು ಎಂಥೆಂಥ ಆರೋಪ ವರ್ಷ ?
ಹಳೆಯ ಆರೋಪಗಳ ಸಂಪಾದನೆಯ ಜೊತೆಗೆ
ಇತ್ತೀಚೆಗೆ ಸರಕಾರಕ್ಕೆ ಅಂದರು ಬಿ. ಬಿ. ಶಿವಪ್ಪ